

ವಿಶ್ವವಿದ್ಯಾಲಯಗಳ ಬಗ್ಗೆ ಒಳ್ಳೆಯ ಮಾಹಿತಿ ನೀಡಿದರು. ಅಲ್ಲಿಂದ ಬಂದ ನಂತರ ‘ಪ್ರಜಾವಾಣಿ’ಗೆ ಲೇಖನ ಸರಣಿಯನ್ನು ಬರೆದೆ. ನಂತರ ಅದು ‘ಪಿರಮಿಡ್ಡುಗಳ ಪರಿಸರದಲ್ಲಿ’ ಪುಸ್ತಕ ರೂಪದಲ್ಲಿಯೂ ಪ್ರಕಟವಾಗಿದೆ.

◆ **ಪ್ರಾಂಶುಪಾಲರಾಗಿದ್ದ ನಿಮಗೆ ಅಕಡೆಮಿಕ್ ಲಾಭದ ನಿರೀಕ್ಷೆ ಇಲ್ಲದಿದ್ದರೂ ನಿವೃತ್ತಿಯ ಅಂಚಿನಲ್ಲಿ ಪಿಎಚ್.ಡಿ. ಮಾಡಿದಿರಿ. ನಿಮ್ಮ ಅಧ್ಯಯನದ ಸ್ವಾರಸ್ಯವನ್ನು ಮೆಲುಕು ಹಾಕಬಹುದೇ?**

ಸಂಶೋಧನೆಯನ್ನು ಆರಂಭದಲ್ಲಿ ಮಾಡದೇ ಇರಲು ಕಾರಣ, ನನ್ನದೇ ಆದ ಕಾವ್ಯಮೀಮಾಂಸೆ ಇರಬೇಕು ಎನ್ನುವ ಧೋರಣೆ. ಅಧ್ಯಾಪಕನಾಗಿದ್ದರಿಂದ ನನ್ನದೇ ಆದ ಅಧ್ಯಯನ ಬೆಳೆದಿತ್ತು. ಮೂಲ ಕಾವ್ಯಮೀಮಾಂಸೆಯ ಮೂಲಕ ನನ್ನದೇ ಆದ ಮೀಮಾಂಸೆಯ ಟಿಪ್ಪಣಿ ಮಾಡಿಕೊಂಡು ಕಾವ್ಯವನ್ನು ನೋಡಿದೆ. ನಾನು ಕಾವ್ಯಮೀಮಾಂಸೆ ಜೀರ್ಣ ಮಾಡಿಕೊಂಡು, ಮುನ್ನೂರು ಕವಿಗಳ ಪಟ್ಟಿಯನ್ನು ಸಿದ್ಧಮಾಡಿಕೊಂಡು ಅಧ್ಯಯನವನ್ನು ಆರಂಭಿಸಿದೆ. ಇದಕ್ಕಾಗಿ ಹಳೆಯ ಪುಸ್ತಕಗಳನ್ನು ಹುಡುಕಿ ತರುತ್ತಿದ್ದೆ. ಯಾವ ವಿಮರ್ಶಕರೂ ಗುರುತಿಸದೇ ಇದ್ದ 16 ಕವಿಗಳಿಗೆ ನನ್ನ ಅಧ್ಯಯನ ಅವಕಾಶ ಕಲ್ಪಿಸಿದೆ. ಅವರು ಯಾರೂ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾದವರಲ್ಲ. ಅಕಡೆಮಿಕ್ ಗುಂಪುಗಾರಿಕೆಯಿಂದ ಹೊರಗಿದ್ದವರನ್ನು ಕನ್ನಡ ವಿಮರ್ಶಾಲೋಕ ಹೇಗೆ ನಿರ್ಲಕ್ಷಿಸಿದೆ ಎಂದು ಆಗ ನೋವಾಗಿತ್ತು. ಪ್ರೊಫೆಸರ್ ಅಲ್ಲದೆ ಇದ್ದರೂ ಒಳ್ಳೆಯ ಸ್ಕಾಲರ್ ಇರಲು ಸಾಧ್ಯ. ಅವರ ಬರಹದಲ್ಲಿನ ಮೌಲ್ಯವನ್ನು ಗುರುತಿಸಬೇಕು ಎನ್ನುವುದನ್ನು ನನ್ನ ಅಧ್ಯಯನದಲ್ಲಿ ನಿರೂಪಿಸಿದ್ದೇನೆ. ಪಿಎಚ್.ಡಿ. ಪದವಿಯಿಂದ ನನಗೆ ಯಾವ ಲಾಭವೂ ಇರಲಿಲ್ಲ. ಅಷ್ಟರಲ್ಲಾಗಲೇ ನನಗೆ ಎಲ್ಲವೂ ಸಿಕ್ಕಿತ್ತು. ಡಾಕ್ಟರೇಟ್ ಅವಾರ್ಡ್‌ನಿಂದ ಒಂದು ಸಾರ್ಥಕತೆ ಸಿಕ್ಕಿದೆ ಎಂದು ಭಾವಿಸಿದ್ದೇನೆ.

◆ **ವಿಧಾನ ಸಭೆಯ ಮೇಲ್ಮನೆಯಲ್ಲಿ ಕನ್ನಡ ಸಾರಸ್ವತ ಲೋಕದ ಪ್ರತಿನಿಧಿಯಾಗಿದ್ದಾಗಿನ ಒಂದೆರಡು ಘಟನೆಗಳನ್ನು ನೆನಪಿಸಿಕೊಳ್ಳಬಹುದೆ?**

ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ನಡೆಯುತ್ತಿತ್ತು. ಆಗ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿ. ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಆಡಳಿತ ಪಕ್ಷದ ಯಾವ ಸದಸ್ಯರೂ ಪ್ರತಿಭಟಿಸಿ ಬಾವಿಗೆ ಬಿದ್ದ ಘಟನೆ ನಡೆದಿರಲಿಲ್ಲ. ನಾನು ಆಡಳಿತ ಪಕ್ಷದಲ್ಲಿ ಇದ್ದೂ ಬಾವಿಗೆ ಬಿದ್ದು ಪ್ರತಿಭಟನೆಯನ್ನು ದಾಖಲಿಸಿದ್ದು ಇತಿಹಾಸ. ರೈತರು ಕಬ್ಬಿಗೆ ಬೆಲೆ ಸಿಕ್ಕಿಲ್ಲ ಎಂದು ಸದನದ ಹೊರಗಡೆ ಪ್ರತಿಭಟಿಸುತ್ತಿದ್ದರು. ‘ಅವರಿಗೆ ಅನ್ಯಾಯ ಆಗಿದೆ. ಇಬ್ಬರು ರೈತರು ಸತ್ತೇ ಹೋಗಿದ್ದಾರೆ. ನಾವು ಅಧಿವೇಶನ ಮಾಡುತ್ತಿದ್ದೇವೆ. ಅಲ್ಲಿ ಸಾವಿನ ಗೋಳಾಟಕ್ಕೆ ಸದನ ಕಿವಿಯಾಗಬೇಕು. ಇದನ್ನು ರೈತಾಪಿ ಕುಟುಂಬದಿಂದ ಬಂದ ನಾನು ಪ್ರತಿಭಟಿಸದೇ ಇನ್ಯಾರು ಪ್ರತಿಭಟಿಸುತ್ತಾರೆ’ ಎಂದು ನನ್ನ ಪ್ರತಿಭಟನೆಗೆ ಆಕ್ಷೇಪಿಸಿದ ಆಡಳಿತ ಪಕ್ಷದ ಸದಸ್ಯರಿಗೆ ಸಮರ್ಥನೆ ನೀಡಿದೆ.

ಮತ್ತೊಂದು ಅಧಿವೇಶನದಲ್ಲಿ, ಇಲಾಖೆಯೊಂದರ ಸಚಿವರು ನೀಡಿದ ಅಂಕಿ ಅಂಶಗಳು ತಪ್ಪಾಗಿವೆ ಎಂದು ಪ್ರಸ್ತಾಪಿಸಿದೆ. ಅರ್ಧ ಗಂಟೆ ಬಿಟ್ಟು ಸಚಿವರು ತಿದ್ದುಪಡಿ ಕಳಿಸಿದರು. ಸದನದಲ್ಲೇ ಅವರು ಕುಳಿತು ಅಂಕಿ ಅಂಶ ಬದಲಿಸಿದ್ದರು. ಆ ಅಂಕಿ ಅಂಶವೂ ತಪ್ಪು. ನನ್ನ ಹತ್ತಿರ ಸರಿಯಾದ ಮಾಹಿತಿ ಇದೆ. ಸಚಿವರು ಜಾಣ ಕುರುಡುತನ ತೋರಿಸುತ್ತಿದ್ದಾರೆ ಎಂದು ಆರೋಪಿಸಿದೆ. ನಂತರ ಅಂಕಿಅಂಶ ಮತ್ತೆ ಬದಲಾಯಿತು, ಅದರಲ್ಲೂ ತಪ್ಪಿತ್ತು. ಆ ಲೋಪವನ್ನು ಖಂಡಿಸಿ ‘ಸದನದ ದಿಕ್ಕು ತಪ್ಪಿಸಬಾರದು’ ಎಂದು ತರಾಟೆ ತೆಗೆದುಕೊಂಡೆ. ಇದೆಲ್ಲ ನಾನು ಸದನಕ್ಕೆ ಸಿದ್ಧತೆ ಮಾಡಿಕೊಂಡು ಹೋಗಿದ್ದರಿಂದ ಸಾಧ್ಯವಾಯಿತು. ಅದಕ್ಕಾಗಿ ನಾನು, ಖಾಸಗಿಯಾಗಿ ನನ್ನ ಖರ್ಚಿನಲ್ಲಿ 10 ಮಂದಿ ಮಾಹಿತಿದಾರರನ್ನು ನೇಮಕ ಮಾಡಿಕೊಂಡಿದ್ದೆ. ಅವರು ವಿಷಯ ಪರಿಣತರಾಗಿದ್ದರಿಂದ ನನಗೆ ಅಗತ್ಯ ಇರುವ ಸಾಕಷ್ಟು ಮಾಹಿತಿಯನ್ನು ನೀಡುತ್ತಿದ್ದರು.

◆ **ಕನ್ನಡ ಮತ್ತು ಸಾಮಾಜಿಕ ಅನ್ಯಾಯದ ಸಂದರ್ಭದಲ್ಲಿ ನಿಮ್ಮಿಂದ ನೇರವಾಗಿ ಪ್ರತಿಕ್ರಿಯೆ ಬಂದಿಲ್ಲ ಎನ್ನುವ ಮಾತೂ ಕೇಳಿಬರುತ್ತದೆ. ಇದು ಏಕೆ?**

ದೂರುವವರು ನನ್ನ ಬಗ್ಗೆ ತಿಳಿದುಕೊಂಡಿಲ್ಲ. ನಾನು ಬರೆದಿದ್ದನ್ನು ಅವರು ಓದಿಲ್ಲ ಅಷ್ಟೇ. ಸಮಾಜಮುಖಿ ಆಗಿಯೇ ಅನೇಕ ಕವಿತೆಗಳನ್ನು ಬರೆದಿದ್ದೇನೆ.

◆ **ಹಾವೇರಿ ಸಮ್ಮೇಳನದಲ್ಲಿ ನಿಮ್ಮ ಭಾಷಣದ ಹೂರಣ ಏನಾಗಿರುತ್ತದೆ?**

ಕನ್ನಡಕ್ಕೆ ಆಗಿರುವ ಅನ್ಯಾಯವನ್ನು ಗುರುತಿಸುತ್ತೇನೆ. ಅದರ ಸುಧಾರಣೆಗೆ ಮಾರ್ಗೋಪಾಯ ಏನು ಎನ್ನುವುದು ಮುಖ್ಯ ಆಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರದ ಜವಾಬ್ದಾರಿಗಳೇನು ಎನ್ನುವ ಕಿವಿಮಾತನ್ನು ಭಾಷಣ ಒಳಗೊಂಡಿರುತ್ತದೆ.

◆ **ಕನ್ನಡಕ್ಕೆ ಹಿಂದಿ ಕಂಟಕ ಆಗುತ್ತಿದೆ. ಆದರೂ ಎರಡನೇ ಆಯ್ಕೆ ಹಿಂದಿಯೇ ಆಗಬೇಕು ಎನ್ನುವ ಮಾತು ಇದೆಯಲ್ಲ.**

ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ. ಇಂಗ್ಲಿಷ್ ಕೂಡ ಅಲ್ಲ. ಅದನ್ನು ‘ಲಿಂಕ್ ಲಾಂಗ್ವೇಜ್’ ಎಂಬ ಪರಿಭಾಷೆಯಲ್ಲಿ ಹೇಳುವುದುಂಟು. ಆದರೆ ನಾನು, ‘ಒಂದನೇ ತರಗತಿಯಿಂದ ಏಳನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿಯೇ ಮಕ್ಕಳಿಗೆ ಶಿಕ್ಷಣ ನೀಡಬೇಕು. ಅವರು ಲೀಲಾಜಾಲವಾಗಿ ಓದುವ, ಬರೆಯುವ ಕ್ರಿಯೆಯಲ್ಲಿ ತೊಡಗಬೇಕು. 8ನೇ ತರಗತಿಯಿಂದ ಪೋಷಕರ ಇಷ್ಟದಂತೆ ಮಾಧ್ಯಮವನ್ನು ಬದಲಿಸಿಕೊಳ್ಳಲಿ’ ಎಂದು ಹೇಳುತ್ತೇನೆ. ಅದು ಮಕ್ಕಳ ಗ್ರಹಿಕೆಯ ವಯಸ್ಸು. ಆ ಸಮಯದಲ್ಲಿ ಬೇರೆ ಭಾಷೆಯ ಮೂಲಕ ಶಿಕ್ಷಣ ನೀಡಿದರೆ ಅವರಿಗೆ ತೊಂದರೆ ಆಗುತ್ತದೆ. ಒಂದು ರೀತಿಯಲ್ಲಿ ಬಲವಂತದ ಮಾಘ ಸ್ನಾನ ಆಗುತ್ತದೆ. ಮಗು ತನ್ನಿಂದ ತಾನೇ ತನ್ನ ಅರಿವನ್ನು ಪ್ರಕಟಿಸುವಂತೆ ಆಗಬೇಕು. ರಾಜ್ಯ ಮಾತ್ರ ಅಲ್ಲ, ಭಾರತದ ಸಂವಿಧಾನ ಒಪ್ಪಿತ ಆಯಾ ರಾಜ್ಯಗಳಲ್ಲಿ

> ನಾನು ನಿತ್ಯ ಒಂದು ಸಿನಿಮಾ ನೋಡುತ್ತೇನೆ. ಹೀಗಾಗಿ, ಅದರ ಪರಿಭಾಷೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯ ಆಗುತ್ತದೆ.